ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೩೬ (೨೪೨೧)

ಸದಸ್ಯರ ಹೆಸರು : ಶ್ರೀ ಕೃಷ್ಣ ಪಾಲೇಮಾರ್ ಜಿ (ಸುರತ್ಕಲ್)

ಉತ್ತರಿಸುವವರು : ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಪ್ರಶ್ನೆ

ಅ) ಕರ್ನಾಟಕ ಭೂಕಂದಾಯ ಕಾಯ್ದೆ ಕಲಂ ೯೪ ಸಿ ಅಡಿಯಲ್ಲಿ ತಿದ್ದುಪಡಿಗೊಂಡ ನಿಯಮಗಳನ್ವಯ ನಗರ ಪ್ರದೇಶದಲ್ಲಿ ೬೦೦ ಚ.ಅಡಿ ವಿಸ್ತೀರ್ಣಕ್ಕಿಂತ ಹೆಚ್ಚಿನ ವಾಸ್ತವ್ಯದ ಜಾಗಕ್ಕೆ ಸ್ಥಳೀಯ ನಗರಾಭಿವೃದ್ಧಿ ಪ್ರಾಧಿಕಾರಗಳು ನಿರ್ಧಿಷ್ಟ ಪಡಿಸಿರುವುದು ಮಾರುಕಟ್ಟೆ ಬೆಲೆಗಿಂತ ದುಪ್ಪಟ್ಟು ಎಂಬುದನ್ನು ಸರ್ಕಾರ ಗಮನಿಸಿದೆಯೇ ;

ಆ) ಹಾಗಿದ್ದಲ್ಲಿ ಆ ಕುರಿತು ಸಾರ್ವಜನಿಕರಿಗೆ ಸರ್ಕಾರ ಒದಗಿಸಿಕೊಡುವ ನ್ಯಾಯವೇನು ;

ಇ) ಈ ತಾರತಮ್ಯ ನಿವಾರಣೆಗಾಗಿ ಸ್ಥಳೀಯ ಮಾರುಕಟ್ಟೆ ದರವನ್ನು ಗಣನೆಗೆ ತೆಗೆದುಕೊಂಡು ನಿವೇಶನ ಮೌಲ್ಯವನ್ನು ನಿಗಧಿಗೊಳಿಸಲು ಭೂಕಂದಾಯ ಅಧಿನಿಯಮಕ್ಕೆ ತಿದ್ದುಪಡಿ ತರುವ ದಿಶೆಯಲ್ಲಿ ಸರ್ಕಾರದ ಕ್ರಮಗಳೇನು ;

ಈ) ದರ ನಿಗದಿ ಪಡಿಸುವ ಕುರಿತಾದ ಕಾನೂನಿನ ಗೊಂದಲದಿದ ಸಾವಿರಾರು ಪ್ರಕರಣಗಳು ಇತ್ಯರ್ಥಗೊಳ್ಳದಿರುವುದರಿಂದ ಸಾರ್ವಜನಿಕರಿಗೆ ಅನಾನುಕೂಲವುಂಟಾಗಿದ್ದು ಅತೀ ಶೀಘ್ರದಲ್ಲಿ ಸರ್ಕಾರ ಈ ಕುರಿತು ನಿಧಾರವನ್ನು ಪ್ರಕಟಿಸುವುದೇ?

ಉತ್ತರ

ಅ) ಇಲ್ಲ.

ಆ) ಸರ್ಕಾರವು ಅಧಿಸೂಚನೆ ಸಂಖ್ಯೆ : ಆರ್‌ಡಿ ೨೨ ಎಲ್‌ಜಿಪಿ ೨೦೦೪, ದಿ:೨೬-೦೮-೦೫ ರಲ್ಲಿ ಕರ್ನಾಟಕ ಸ್ವಾಧೀನ ಪಡಿಸಿಕೊಂಡ ಭೂಮಿಯಲ್ಲಿ ವಾಸದ

ಮನೆಗಳ ನಿರ್ಮಾಣದ ಸಂದರ್ಭದಲ್ಲಿ ಭೂ ಮಂಜೂರಾತಿ ನಿಯಮಾವಳಿಗಳ ನಿಯಮ ೬ನ್ನು ತಿದ್ದುಪಡಿ ಮಾಡಿದ ರೀತ್ಯ ೯೪ ಸಿ ಪ್ರಕರಣಗಳ ಮೇರೆಗೆ ನಿವೇಶನ ಮಂಜೂರಾತಿಗಾಗಿ ನಿರ್ದಿಷ್ಟ ಅವಧಿಯಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಅವುಗಳ ವಿಸ್ತೀರ್ಣ ನಗರ ಪ್ರದೇಶಗಳಲ್ಲಿ ೨೦x೩೦ ಅಡಿ ವಿಸ್ತೀರ್ಣದ ನಿವೇಶನ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ೩೦x೪೦ ಅಡಿ ನಿವೇಶನಗಳಿಗೆ ಸಂಬಂಧಿಸಿದಂತೆ ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಸೇರಿದ ವ್ಯಕ್ತಿಗಳು ಯಾವುದೇ ಮೊಬಲಗನ್ನು ಸಂದಾಯ ಮಾಡುವಂತಿಲ್ಲ ಮತ್ತು ಈ ಅಳತೆಗೆ ಮೀರಿದ ಭೂಮಿಯನ್ನು ಅವರಿಗೆ ಮಂಜೂರು ಮಾಡುವ ಸಂದರ್ಭದಲ್ಲಿ ಮಾತ್ರ ಈ ಅಳತೆಗೆ ಮೀರಿದ ನಿವೇಶನಗಳಿಗೆ ಸಂಬಂಧಿಸಿದಂತೆ ಸಂಬಂಧಿತ ಸ್ಥಳೀಯ ಅಭಿವೃದ್ಧಿ ಅವುಗಳ ಲೇಔಟ್ ನಲ್ಲಿ ನಿರ್ದಿಷ್ಟ ಪಡಿಸಿರುವ ನಿವೇಶನದ ಮೌಲ್ಯವನ್ನು ಸಾರ್ವಜನಿಕರು ನೀಡಬೇಕಾಗುತ್ತದೆ.

ಇ) ಈ ವಿಷಯದಲ್ಲಿ ಸರ್ಕಾರ ತಾರಮ್ಯ ಮಾಡಿಲ್ಲದಿರುವುದರಿಂದ ಭೂ ಕಂದಾಯ ಅಧಿನಿಯಮಕ್ಕೆ ತಿದ್ದುಪಡಿ ತರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ದರ ನಿಗದಿ ಪಡಿಸುವ ಸಂಬಂಧ ನಿರ್ದಿಷ್ಟ ನಿಯಮಗಳಿರುವುದರಿಂದ ಯಾವುದೇ ಕಾನೂನು ಗೊಂದಲ ಉಂಟಾಗಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೩೭ (೨೪೨೨)

ಸದಸ್ಯರ ಹೆಸರು : ಶ್ರೀ ಕೃಷ್ಣ ಪಾಲೇಮಾರ್ ಜಿ (ಸುರತ್ಕಲ್)

ಉತ್ತರಿಸುವವರು : ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು)

ಪ್ರಶ್ನೆ

ಅ) ಸುರತ್ಕಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಚೇಳ್ಯಾರು – ಹಳೆಯಂಗಡಿ ಎಂಬಲ್ಲಿ ಹರಿಯುವ ನಂದಿನಿ ನದಿಯ ಉಪ್ಪು ನೀರು ತಡೆಯುವ ಅಣೆಕಟ್ಟು ದುರ್ಬಲ ಸ್ಥಿತಿಯಲ್ಲಿದ್ದು, ಉಪ್ಪು ನೀರು ನದಿಯೂ ಹಿಂದಕ್ಕೆ ಹರಿಯುತ್ತಿರುವ ಕಾರಣ ಸಾವಿರಾರು ಎಕರೆ ಪ್ರದೇಶದ ಕೃಷಿ ಭೂಮಿಯಲ್ಲಿ ಬೆಳೆ ಬೆಳೆಯಲು ತೊಂದರೆಯುಂಟಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ ;